ಕುಶಾಲನಗರ ಯೋಜನಾ ಪ್ರಾಧಿಕಾರ ಕುಶಾಲನಗರ

ಕಾವೇರಿ ಬಡಾವಣೆ, ನಿ.ಸಂ.05, ಬ್ಲಾಕ್ ನಂ.01, ಕುಶಾಲನಗರ – 571234

Email Id: kushalnagaradtp@hotmail.com ದೂರವಾಣಿ ಸಂ: 08276–274040

ಸಂಖ್ಯೆ:ಕುಯೋಪ್ರಾ/ಪ್ರಾ.ಸಭೆ/49/2022–23 ದಿನಾಂಕ:

ಕುಶಾಲನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ.ಎಂ.ಎಂ. ಚರಣ್ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 05–05–2022 ರ ಗುರುವಾರದಂದು ಪೂರ್ವಾಹ್ನ 11.30 ಗಂಟೆಗೆ ಜರುಗಿದ 49ನೇ ಸಾಮಾನ್ಯ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದವರು :–

1) ಶ್ರೀ ಎಂ.ಎಂ. ಚರಣ್, ಅಧ್ಯಕ್ಷರು
2) ಸದಸ್ಯ ಕಾರ್ಯದರ್ಶಿ
3) ಶ್ರೀ ವೈಶಾಖ್, ನಾಮನಿರ್ದೇಶಿತ ಸದಸ್ಯರು.
4) ಶ್ರೀ ಪಂಡರೀಕಾಕ್ಷ, ನಾಮನಿರ್ದೇಶಿತ ಸದಸ್ಯರು
5) ಶ್ರೀ ಮಧುಸೂಧನ್, ನಾಮನಿರ್ದೇಶಿತ ಸದಸ್ಯರು
6) ಶ್ರೀ ಅಮೃತ್‌ರಾಜ್, ಸ್ಥಳೀಯ ಸಂಸ್ಥೆ ನಾಮನಿರ್ದೇಶಿತ ಸದಸ್ಯರು
7) ಮುಖ್ಯಾಧಿಕಾರಿಗಳು, ಪಟ್ಟಣಪಂಚಾಯಿತಿ, ಕುಶಾಲನಗರ

ಗೈರುಹಾಜರಾದವರು :–

1) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಮುಳ್ಳುಸೋಗೆ ಗ್ರಾಮ ಪಂಚಾಯಿತಿ
3) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಕೂಡುಮಂಗಳೂರು ಗ್ರಾಮ ಪಂಚಾಯಿತಿ
4) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಗುಡ್ಡೆಹೊಸೂರು ಗ್ರಾಮ ಪಂಚಾಯಿತಿ

ವಿಷಯ ಸಂಖ್ಯೆ:– 1):– ದಿನಾಂಕ: 30–03–2022ರಂದು ನಡೆದ 48ನೇ ಯೋಜನಾ ಪ್ರಾಧಿಕಾರದ ಸಾಮಾನ್ಯ ಸಭೆಯ ನಡವಳಿಗಳನ್ನು ಸ್ಥಿರೀಕರಿಸಿರುವ ಬಗ್ಗೆ.

ಟಿಪ್ಪಣಿ : ದಿನಾಂಕ: 30–03–2022 ರಂದು ನಡೆದ 48ನೇ ಪ್ರಾಧಿಕಾರದ ಸಭೆಯ ನಡವಳಿಗಳನ್ನು ಓದಿ ಒಪ್ಪಿ ಸ್ಥಿರೀಕರಿಸುವ ಬಗ್ಗೆ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

ನಿರ್ಣಯ:– :– ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಓದಿ, ಪ್ರತಿಯೊಂದು ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಯಿತು. ನಡವಳಿಗಳನ್ನು ಒಪ್ಪಿ ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ:– 2):– ಪ್ರಾಧಿಕಾರದ ಖಾತೆಗೆ ಮಾರ್ಚ್ 2022 ರ ಮಾಹೆಯ ಜಮಾ ಮತ್ತು ಖರ್ಚುಗಳ ವಿವರದ ಬಗ್ಗೆ ಪ್ರಾಧಿಕಾರದ ಸಭೆಗೆ ಮಂಡಿಸುವ ಬಗ್ಗೆ.

ಟಿಪ್ಪಣಿ : ಮಾರ್ಚ್ 2022 ರ ಮಾಹೆಯ ಜಮಾ ಮತ್ತು ಖರ್ಚುಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದ್ದು, ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ

ನಿರ್ಣಯ:– ಮಾರ್ಚ್ 2022 ರ ಮಾಹೆಯ ಜಮಾ ಮತ್ತು ಖರ್ಚುಗಳನ್ನು ಸಭೆಯಲ್ಲಿ ಚರ್ಚಿಸಿ, ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

ಪು.ತಿ.ನೋ

<u>ವಿಷಯ ಸಂಖ್ಯೆ: 03</u> – ಸಭೆಯ ಸ್ಥೀರೀಕರಣಕ್ಕಾಗಿ ಮಂಡಿಸಿರುವ ಪ್ರಸ್ತಾವನೆಗಳು:–

1) ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 23/27 ರಲ್ಲಿನ 0.05 ಎಕರೆ ವಿಸ್ತೀರ್ಣದ ಜಮೀನಿನ ಏಕ–ನಿವೇಶನ ವಸತಿ ವಿನ್ಯಾಸ ನಕ್ಷೆಗೆ ನೀಡಿರುವ ತಾಂತ್ರಿಕ ಅನುಮೋದನೆಯನ್ನು ಸಭೆಯು ಸ್ಥಿರೀಕರಿಸುವ ಬಗ್ಗೆ. (**ಅರ್ಜಿದಾರರು:–ಪಿ.ಜೆ. ರೋಹಿತಾಶ್ವ**)

<u>ಟಿಪ್ಪಣಿ:</u> ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 23/27 ರಲ್ಲಿನ 0.05 ಎಕರೆ ವಿಸ್ತೀರ್ಣದ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ, ಮಡಿಕೇರಿ ಇವರ ಅಧಿಕೃತ ಜ್ಞಾಪನ ಪತ್ರ ಸಂ: LAND10002018 ದಿನಾಂಕ: 01–03–2018 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಸ್ತಾವಿತ ಜಮೀನು ತಾತ್ಕಾಲಿಕ ಮಹಾಯೋಜನೆಯಲ್ಲಿ ವಸತಿ ವಲಯದಲ್ಲಿದೆ ಹಾಗೂ ಪಶ್ಚಿಮ ದಿಕ್ಕಿನಲ್ಲಿ 9.0ಮೀ ಅಗಲದ ಸಾರ್ವಜನಿಕ ರಸ್ತೆಗೆ ಲಗತ್ತಾಗಿದೆ. ಸದರಿ ಜಮೀನಿನ ಏಕ–ನಿವೇಶನ ವಿನ್ಯಾಸ ನಕ್ಷೆಯಲ್ಲಿ ವಸತಿ ಉಪಯೋಗಕ್ಕಾಗಿ 202.40 ಚ.ಮೀ (ಶೇ. 100.00%) ವಿಸ್ತೀರ್ಣದ ಪ್ರದೇಶವನ್ನು ನಿಗದಿಪಡಿಸಿ ವಸತಿ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ: 17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥೀರೀಕರಣಕ್ಕಾಗಿ ಮಂಡಿಸಿದೆ.

2) ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮಾದಾಪಟ್ಟಣ ಗ್ರಾಮದ ಸ.ನಂ. 62/14 ರಲ್ಲಿನ 0.11 ಎಕರೆ ವಿಸ್ತೀರ್ಣದ ಜಮೀನಿನ ಏಕ–ನಿವೇಶನ ವಸತಿ ವಿನ್ಯಾಸ ನಕ್ಷೆಗೆ ನೀಡಿರುವ ತಾಂತ್ರಿಕ ಅನುಮೋದನೆಯನ್ನು ಸಭೆಯು ಸ್ಥಿರೀಕರಿಸುವ ಬಗ್ಗೆ. (**ಅರ್ಜಿದಾರರು: ಶ್ರೀ ಧನವೇಲು ಬಿನ್ ಗೋವಿಂದಸ್ವಾಮಿ**)

<u>ಟಿಪ್ಪಣಿ:</u> ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮಾದಾಪಟ್ಟಣ ಗ್ರಾಮದ ಸ.ನಂ. 62/14 ರಲ್ಲಿನ 0.11 ಎಕರೆ ವಿಸ್ತೀರ್ಣದ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿ, ಕೊಡಗು ಜಿಲ್ಲೆ, ಮಡಿಕೇರಿ ಇವರ ಅಧಿಕೃತ ಜ್ಞಾಪನ ಪತ್ರ ಸಂ: 198814 ದಿನಾಂಕ: 02–09–2021 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ಪ್ರಸ್ತಾವಿತ ಜಮೀನು ತಾತ್ಕಾಲಿಕ ಮಹಾಯೋಜನೆಯಲ್ಲಿ ವಸತಿ ವಲಯದಲ್ಲಿದೆ ಹಾಗೂ ಪಶ್ಚಿಮ ದಿಕ್ಕಿನಲ್ಲಿ 12.0ಮೀ ಅಗಲದ ಗ್ರಾಮಪಂಚಾಯಿತಿ ರಸ್ತೆಗೆ ಲಗತ್ತಾಗಿದೆ. ಸದರಿ ಜಮೀನಿನ ಏಕ–ನಿವೇಶನ ವಿನ್ಯಾಸ ನಕ್ಷೆಯಲ್ಲಿ ವಸತಿ ಉಪಯೋಗಕ್ಕಾಗಿ 439.66 ಚ.ಮೀ (ಶೇ. 100.00%) ವಿಸ್ತೀರ್ಣದ ಪ್ರದೇಶವನ್ನು ನಿಗದಿಪಡಿಸಿ ವಸತಿ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ: 17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥೀರೀಕರಣಕ್ಕಾಗಿ ಮಂಡಿಸಿದೆ.

<u>ನಿರ್ಣಯ:–</u> ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ ಮೇಲ್ಕಾಣಿಸಿದ ಕಡತಗಳಿಗೆ ತಾಂತ್ರಿಕ ಅನುಮೋದನೆ ನೀಡಿರುವುದನ್ನು ಸಭೆಯು ಸರ್ವಾನುಮತದಿಂದ ಸ್ಥಿರೀಕರಿಸಿತು.

<u>ವಿಷಯ ಸಂಖ್ಯೆ: 04</u> – ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ, 1ನೇ ಬ್ಲಾಕ್, ಬೈಚನಹಳ್ಳಿ ಗ್ರಾಮದ ಸ.ನಂ. 115/1 ರಲ್ಲಿ ಅನಧಿಕೃತವಾಗಿ ಯಾವುದೇ ಪರವಾನಗಿ ಇಲ್ಲದೇ ಲೇಔಟ್ ನಿರ್ಮಾಣ ಹಾಗೂ ಅದರ ಒಳಗೆ ಅನಧಿಕೃತ ಕಟ್ಟಡ ಕಾಮಗಾರಿ ಮಾಡುತ್ತಿರುವ ಬಗ್ಗೆ ಮಾನ್ಯ ಉಚ್ಚನ್ಯಾಯಾಲಯ, ಬೆಂಗಳೂರು ಇವರ ಆದೇಶದನ್ವಯ ಕ್ರಮವಹಿಸಲು ಕೋರಿ ಶ್ರೀ ಡಿ.ಸಿ. ಜಗದೀಶ್ ಬಿನ್ ಚಂದ್ರಶೇಖರ್ ಇವರು ಸಲ್ಲಿಸಿರುವ ಅರ್ಜಿ ಬಗ್ಗೆ.

ಪು.ತಿ.ನೋ

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಜಗದೀಶ್ ಡಿ.ಸಿ ಬಿನ್ ದಿ. ಡಿ.ಕೆ ಚಂದ್ರಶೇಖರ ಇವರು ದಿನಾಂಕ: 18–04–2022 ರಂದು ಈ ಕಛೇರಿಗೆ ಪತ್ರ ಬರೆದು ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ, 1ನೇ ಬ್ಲಾಕ್, ಬೈಚನಹಳ್ಳಿ ಗ್ರಾಮ ಸ.ನಂ. 115/1 ರಲ್ಲಿ ಶ್ರೀ ಜಗದೀಶ್, ಶ್ರೀ ವಿಶ್ವನಾಥ್ ಹಾಗೂ ಶ್ರೀ ಶಮಂತ ಇವರುಗಳು ಅನಧಿಕೃತವಾಗಿ ಯಾವುದೇ ಪರವಾನಗಿ ಇಲ್ಲದೇ ಲೇಔಟ್ ನಿರ್ಮಾಣ ಅದರ ಒಳಗೆ ಅನಧಿಕೃತ ಕಟ್ಟಡ ಕಾಮಗಾರಿ ಮಾಡುತ್ತಿದ್ದು ಈ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯ ಕರ್ನಾಟಕ ಬೆಂಗಳೂರು ಇಲ್ಲಿ ರಿಟ್ ನಂ 5656/2022 (ಎಲ್‌ಬಿ–ರೆಸ್) ಅರ್ಜಿಯನ್ನು ಸಲ್ಲಿಸಿದ್ದು ಸದರಿ ಅರ್ಜಿಯನ್ನು ವಿಚಾರಣೆ ಮಾಡಿ ಮಾನ್ಯ ಉಚ್ಚನ್ಯಾಯಾಲಯವು ಸೂಕ್ತ ಕ್ರಮವನ್ನು ತೆಗೆದುಕೊಂಡು 8 ವಾರಗಳ ಒಳಗೆ ವಿವರಣೆ ನೀಡುವಂತೆ ಈ ಕಛೇರಿಗೆ ಆದೇಶವನ್ನು ಮಾಡಿದ್ದು, ನ್ಯಾಯಾಲಯದ ಸದರಿ ಆದೇಶದ ಪ್ರತಿಯನ್ನು ಸಲ್ಲಿಸುತ್ತಾ ನ್ಯಾಯಾಲಯದ ಆದೇಶದಂತೆ ಸೂಕ್ತ ಕ್ರಮಕೈಗೊಳ್ಳುವಂತೆ ಕೋರಿರುತ್ತಾರೆ. ಈ ಬಗ್ಗೆ ಪರಿಶೀಲಿಸಲಾಗಿ ಆದೇಶ ರಿಟ್ ಅರ್ಜಿ ಸಂಖ್ಯೆ 5656/2022 (ಎಲ್‌ಬಿ–ಆರ್‌ಇಎಸ್) ಸಂಬಂಧಿಸಿದಂತೆ ಮಾನ್ಯ ಉಚ್ಚನ್ಯಾಯಾಲಯವು ದಿನಾಂಕ: 01–04–2022 ರಲ್ಲಿ ಈ ಕೆಳಕಂಡಂತೆ ಆದೇಶ ನೀಡಿರುತ್ತದೆ.

The short grievance of the petitioner is as to non-consideration of his representations 11.03.2020 & 26.05.2020, copies whereof are at A & B respectively. This consideration has to happen at the hands of the fifth respondent-Town Planning Officer.

Learned AGA on request having accepted notice for Respondent Nos.1, 2 & 3 opposes the writ petition contending that no request can be made to the Town Municipal Bodies not to grant sanction for layouts and not to accord permission for construction. Having so contended, now he fairly agrees to instruct his cilents to direct the fifth respondent to consider the subject representation in accordance with law and in a time bound way. This is appreciable.

In the above circumstances, this writ petition is disposed off, costs having been made easy. Time for compliance is eight weeks.

ಸದರಿ ಆದೇಶದ ಮೂಲಪ್ರತಿಯು ಅಂಚೆ ಮುಖಾಂತರ ದಿನಾಂಕ: 28–04–2022 ರಂದು ಈ ಕಛೇರಿಯಲ್ಲಿ ಸ್ವೀಕರಿಸಲಾಗಿರುತ್ತದೆ.

ದಿನಾಂಕ: 11–03–2020 ರಂದು ದೂರುದಾರರಾದ ಶ್ರೀ ಜಗದೀಶ್ ಬಿನ್ ಚಂದ್ರಶೇಖರ್ ಇವರು ಸ.ನಂ. 115/1 ರಲ್ಲಿ 0.03 ಎಕರೆ ಜಮೀನು ಖರೀದಿಸಿದ್ದು ಸದರಿ ಜಾಗಕ್ಕೆ ರಸ್ತೆ ಬಿಡಲು ಒಪ್ಪಿ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ. ಆದರೆ ಸದರಿ ಉಳಿಕೆ ಜಾಗವನ್ನು ಬಡಾವಣೆಯಾಗಿ ರಚನೆ ಮಾಡುತ್ತಿದ್ದು ನನ್ನ ಜಾಗಕ್ಕೆ ಯಾವುದೇ ರಸ್ತೆ ಬಿಡದೆ ಬಡಾವಣೆ ಮಾಡಲಾಗಿರುತ್ತದೆ. ಒಂದು ವೇಳೆ ಬಡಾವಣೆ ರಚನೆ ಮಾಡಿದರೆ ನನಗೆ ತಿರುಗಾಡಲು ರಸ್ತೆ ಇಲ್ಲದಂತಾಗುವುದರಿಂದ ಸ.ನಂ. 115/1 ರಲ್ಲಿ ಬಡಾವಣೆ ಮಾಡುತ್ತಿರುವುದಕ್ಕೆ ಈ ಕಛೇರಿಯಿಂದ ಅನುಮತಿ ನೀಡಬಾರದು ಎಂಬುದಾಗಿ ತಕರಾರು ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ಪರಿಶೀಲಿಸಿದ ಅಂದಿನ ಸದಸ್ಯಕಾರ್ಯದರ್ಶಿಯವರು ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ, 1ನೇ ಬ್ಲಾಕಿನ ಸ.ನಂ. 115/1 ರಲ್ಲಿನ ಜಮೀನಿಗೆ ಸಂಬಂಧಿಸಿದಂತೆ ಈ ಕಛೇರಿಯಿಂದ ಬಡಾವಣೆ ನಿರ್ಮಿಸಲು ವಿನ್ಯಾಸ ನಕ್ಷೆಗೆ ಅನುಮೋದನೆಯನ್ನು ಪಡೆದುಕೊಂಡಿರುವುದಿಲ್ಲ. ಪ್ರಶ್ನಿತ ಸ.ನಂ. 115/1 ರಲ್ಲಿನ 1.585 ಎಕರೆ ವಿಸ್ತೀರ್ಣದ

ಭೂ–ಪರಿವರ್ತಿತ ಜಮೀನಿಗೆ 1976ರ ಪೂರ್ವದಲ್ಲಿ ಖಾತೆ ದಾಖಲಾಗಿರುವ ಕಾರಣ ಖಾತೆ ದಾಖಲಾಗಿರುವ ಪೂರ್ತಿ ವಿಸ್ತೀರ್ಣಕ್ಕೆ ಈ ಕಛೇರಿಯಿಂದ ಕಟ್ಟಡ ನಿರ್ಮಾಣ ಸಂಬಂಧ ನೀಲಿ ನಕ್ಷೆಗಳಿಗೆ ತಾಂತ್ರಿಕ ಅನುಮೋದನೆ ನೀಡಲಾಗಿದೆ. ದೂರುದಾರರು ತಕರಾರು ಅರ್ಜಿಯಲ್ಲಿ ಪ್ರಶ್ನಿತ ಜಮೀನನ್ನು ಬಡಾವಣೆಯಾಗಿ ಅಭಿವೃದ್ಧಿಪಡಿಸುತ್ತಿರುವುದಾಗಿ ತಿಳಿಸಿರುತ್ತಾರೆ. ಪ್ರಶ್ನಿತ ಜಮೀನಿನ ಸ್ಥಳ ಪರಿಶೀಲನೆ ಮಾಡಲಾಗಿ, ಸದರಿ ಜಮೀನನ್ನು ಸಮತಟ್ಟುಗೊಳಿಸಿರುವುದು ಕಂಡುಬಂದಿದ್ದು, ಇತರೆ ಯಾವುದೇ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ. ಪ್ರಶ್ನಿತ ಭೂ–ಪರಿವರ್ತಿತ ಜಮೀನನ್ನು ವಿಭಜಿಸಲು ಪ್ರಾಧಿಕಾರದಿಂದ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆಯದಿರುವ ಕಾರಣ, ಮೇಲ್ಕಾಣಿಸಿದ ಸರ್ವೆ ನಂಬರ್‌ನಲ್ಲಿರುವ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಖಾತೆಯನ್ನು ತಮ್ಮ ಕಛೇರಿಯಲ್ಲಿ ನೊಂದಾಯಿಸಬಾರದೆಂದು ತಿಳಿಸುತ್ತಾ, ಈ ಬಗ್ಗೆ ಸಂಬಂಧಪಟ್ಟ ಜಮೀನಿನ ಮಾಲೀಕರಿಗೆ ಸೂಚನೆಯನ್ನು ನೀಡಿ ಅನಧಿಕೃತ ಬಡಾವಣೆಯನ್ನು ನಿರ್ಮಿಸಲು ಅವಕಾಶ ನೀಡಬಾರದೆಂದು ಈ ಕಛೇರಿಯಿಂದ ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ ಕುಶಾಲನಗರ ಇವರಿಗೆ ದಿನಾಂಕ: 12–05–2020 ರಂದು ಸೂಚಿಸಲಾಗಿರುತ್ತದೆ.

ದಿನಾಂಕ: 26–05–2020 ರಂದು ದೂರುದಾರರಾದ ಶ್ರೀ ಡಿ.ಸಿ. ಜಗದೀಶ್ ಬಿನ್ ಚಂದ್ರಶೇಖರ್ ಇವರು ಮತ್ತೊಮ್ಮೆ ಈ ಕಛೇರಿಗೆ ಪತ್ರ ಬರೆದು ಸ.ನಂ. 115/1 ರಲ್ಲಿನ ಜಮೀನಿನಲ್ಲಿ ಕಾಮಗಾರಿ ಶುರುಮಾಡಿದ್ದು ಈ ಬಗ್ಗೆ ಪರಿಶೀಲನೆ ಮಾಡಿ ಕಾಮಗಾರಿ ನಿರ್ವಹಿಸದಂತೆ ತಡೆ ಹಿಡಿಯಲು ಕೋರಿರುತ್ತಾರೆ. ಈ ಬಗ್ಗೆ ಪರಿಶೀಲಿಸಿ ದಿನಾಂಕ: 09–06–2020 ರಂದು ಶ್ರೀ ಟಿ. ವಿಜಯನ್ ಸಂದೀಪ್ ಇವರಿಗೆ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14, 15, 17 ಗಳನ್ನು ಉಲ್ಲಂಘಿಸಿರುವ ಬಗ್ಗೆ ಹಾಗೂ ಅಭಿವೃದ್ಧಿಗೆ ಅನುಮತಿ ಪಡೆದಿದ್ದಲ್ಲಿ ಅನುಮೋದನೆಯ ನಕಲು ಪ್ರತಿಯನ್ನು ಏಳು ದಿನಗಳಲ್ಲಿ ಈ ಕಛೇರಿಗೆ ಹಾಜರುಪಡಿಸಲು ಹಾಗೂ ಅಲ್ಲಿಯವರೆಗೆ ಅಭಿವೃದ್ಧಿ ಕಾಮಗಾರಿಯನ್ನು ತಕ್ಷಣದಿಂದ ಸ್ಥಗಿತಗೊಳಿಸಲು ಹಾಗೂ ತಪ್ಪಿದಲ್ಲಿ ನಿಯಮಾನುಸಾರ ಮುಂದಿನ ಕ್ರಮಜರುಗಿಸುವ ಬಗ್ಗೆ ದಿನಾಂಕ: 09–06–2020 ರಂದು ನೋಟೀಸು ನೀಡಲಾಗಿರುವುದು ಕಂಡುಬಂದಿದೆ. ಉಪನೊಂದಣಾಧಿಕಾರಿಗಳು, ಕುಶಾಲನಗರ ಇವರಿಗೆ ಮೇಲ್ಕಂಡ ಸರ್ವೆ ನಂಬರ್‌ಗಳಲ್ಲಿನ ಜಮೀನಿನ ನಿವೇಶನ ನೋಂದಣಿ ಮಾಡಬಾರದೆಂದು ತಿಳಿಸಲಾಗಿರುತ್ತದೆ ಮತ್ತು ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ ಇವರಿಗೆ ಅನಧಿಕೃತ ಬಡಾವಣೆ ಕಾಮಗಾರಿ ಸ್ಥಗಿತಗೊಳಿಸಲು ಹಾಗೂ ಕರ್ನಾಟಕ ಪುರಸಭೆ ಕಾಯ್ದೆ 1964 ರನ್ವಯ ಮುಂದಿನ ಕ್ರಮವಹಿಸಲು ತಿಳಿಸಲಾಗಿರುವುದು ಕಂಡುಬಂದಿದ್ದು, ಸದರಿ ನೋಟಿಸಿಗೆ ಸಂಬಂಧಿಸಿದಂತೆ ಜಮೀನಿನ ಮಾಲೀಕರು ಪರವಾನಿಗೆ ಪಡೆದಿರುವ ಬಗ್ಗೆ ಯಾವುದೇ ದಾಖಲೆಯನ್ನು ಈ ಕಛೇರಿಗೆ ಇಲ್ಲಿಯವರೆಗೆ ಹಾಜರುಪಡಿಸಿರುವುದು ಕಂಡುಬಂದಿರುವುದಿಲ್ಲ.

ದಿನಾಂಕ: 06–01–2022 ರಲ್ಲಿ ಶ್ರೀ ಡಿ.ಸಿ. ಜಗದೀಶ್ ಬಿನ್ ಚಂದ್ರಶೇಖರ್ ಇವರು ಶ್ರೀ ಜಗದೀಶ್, ಶ್ರೀ ವಿಶ್ವನಾಥ್ ಹಾಗೂ ಶ್ರೀ ಶಮಂತ ಇವರು ಬೈಚನಹಳ್ಳಿ ಗ್ರಾಮ, ಸ.ನಂ. 145/1 ಮತ್ತು 115/1 ರಲ್ಲಿ ಅನಧಿಕೃತವಾಗಿ ಯಾವುದೇ ಪರವಾನಿಗೆ ಇಲ್ಲದೆ ಲೇಔಟ್ ನಿರ್ಮಾಣ ಅದರ ಒಳಗೆ ಅನಧಿಕೃತ ಕಟ್ಟಡ ಕಾಮಗಾರಿ ಮಾಡುತ್ತಿರುವುದರಿಂದ ಲೇಔಟ್ ವಿರುದ್ಧ ಕ್ರಮಕೈಗೊಳ್ಳುವಂತೆ ದೂರು ಸಲ್ಲಿಸಿದ್ದು, ಈ ಬಗ್ಗೆ ಸ್ಥಳಪರಿಶೀಲಿಸಲಾಗಿ, ಪ್ರಸ್ತಾವಿತ ಜಮೀನಿಗೆ ನಿಯಮಾನುಸಾರ ವಿನ್ಯಾಸ ಅನುಮೋದನೆ ಪಡೆಯದೇ ಲೇಔಟ್ ನಿರ್ಮಿಸಿ, ಕಾಂಪೌಂಡ್ ಕಾಮಗಾರಿಯನ್ನು ನಡೆಸುತ್ತಿರುವುದು ಕಂಡುಬಂದಿದ್ದು, ಸದರಿ ಅಭಿವೃದ್ಧಿಗಳಿಗೆ ಅನುಮತಿ ಪಡೆದಿದ್ದಲ್ಲಿ ಅನುಮೋದಿತ ದಾಖಲೆಯ ನಕಲು ಪ್ರತಿಯನ್ನು ಏಳು ದಿನಗಳಲ್ಲಿ ಈ ಕಛೇರಿಗೆ ಹಾಜರುಪಡಿಸಲು ಸೂಚಿಸಲಾಗಿದೆ ಹಾಗೂ ಅಲ್ಲಿಯವರೆಗೆ ಕಾಮಗಾರಿಯನ್ನು ಸ್ಥಗಿತಗೊಳಿಸುವಂತೆ ಶ್ರೀ ಕೆ.ಎಂ. ಜಗದೀಶ್, ಶ್ರೀ ಎ.ಎಂ. ವಿಶ್ವನಾಥ್ ಹಾಗೂ ಶ್ರೀ ಬಿ.ಜೆ. ಶಮಂತ್ ಇವರಿಗೆ ದಿನಾಂಕ: 11–01–2022 ರಲ್ಲಿ ಈ ಕಛೇರಿಯಿಂದ ನೋಟೀಸು ನೀಡಲಾಗಿದೆ ಹಾಗೂ ಜಮೀನಿನ ಮಾಲೀಕರು ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದಂತೆ ಅನುಮೋದನೆ ಹೊಂದಿಲ್ಲದೇ ಇದ್ದಲ್ಲಿ ಕಾಮಗಾರಿಯನ್ನು ಸ್ಥಗಿತಗೊಳಿಸುವ ಬಗ್ಗೆ ಕರ್ನಾಟಕ ಪುರಸಭೆ ಕಾಯ್ದೆ 1964 ರನ್ವಯ ಸೂಕ್ತ ಕ್ರಮಕೈಗೊಳ್ಳುವಂತೆ ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ,

ಕುಶಾಲನಗರ ಇವರಿಗೆ ಸೂಚಿಸಲಾಗಿರುತ್ತದೆ. ಸದರಿ ನೋಟೀಸಿಗೆ ಸಂಬಂಧಿಸಿದಂತೆ ಜಮೀನಿನ ಮಾಲೀಕರುಗಳು ಅಭಿವೃದ್ಧಿ ಕಾರ್ಯಗಳಿಗೆ ಅನುಮತಿ ಪಡೆದಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಇಲ್ಲಿಯವರೆಗೆ ಈ ಕಛೇರಿಗೆ ಸಲ್ಲಿಸಿರುವುದಿಲ್ಲ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಲ್ಲಿ fifth respondent to consider the subject representation in accordance with law and in a time bound way ಎಂಬುದಾಗಿ ಆದೇಶ ನೀಡಿರುವುದರ ಮೇರೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರನ್ವಯ ಸೂಕ್ತ ಕಾನೂನು ಕ್ರಮ ವಹಿಸಲು ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕೆ ಮಂಡಿಸಿದೆ.

<u>ಸದಸ್ಯ ಕಾರ್ಯದರ್ಶಿಯವರ ಅಭಿಪ್ರಾಯ:</u> ಕುಶಾಲನಗರ ಪಟ್ಟಣಕ್ಕೆ ಸರ್ಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 4(ಎ) ರನ್ವಯ ಸ್ಥಳೀಯ ಯೋಜನಾ ಪ್ರದೇಶವನ್ನು 2008 ರಲ್ಲಿ ಘೋಷಿಸಿ, ಯೋಜನಾ ಪ್ರಾಧಿಕಾರವನ್ನು 2009 ರಲ್ಲಿ ರಚಿಸಿ ಆದೇಶಿಸಿರುತ್ತದೆ. ಅದರಂತೆ ಪ್ರಾಧಿಕಾರವು ಅಸ್ಥಿತ್ವಕ್ಕೆ ಬಂದು ಕಾರ್ಯ ನಿರ್ವಹಿಸುತ್ತಿದ್ದು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಕೈಗೊಳ್ಳಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 15 ಮತ್ತು 17 ರನ್ವಯ ಪ್ರಾಧಿಕಾರದಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಆದರೆ, ದೂರದಾರರು ನಮೂದಿಸಿರುವ ಜಮೀನನ್ನು ಅಭಿವೃದ್ಧಿಪಡಿಸಲು ಪ್ರಾಧಿಕಾರದಿಂದ ಅನುಮತಿ ಪಡೆಯದೇ ಇರುವುದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 15(1) ಮತ್ತು 17(1) ಅನ್ನು ಉಲ್ಲಂಘಿಸಿದಂತಾಗುತ್ತದೆ ಹಾಗೂ ಪ್ರಾಧಿಕಾರದಿಂದ ಈ ಹಿಂದೆ ನೀಡಿರುವ ನೋಟೀಸಿನಂತೆ ಜಮೀನಿನ ಮಾಲೀಕರು ಅನುಮೋದನೆ ಪಡೆದುಕೊಂಡಿರುವ ಬಗ್ಗೆ ದಾಖಲೆಗಳನ್ನು ಪ್ರಾಧಿಕಾರದ ಕಛೇರಿಗೆ ಸಲ್ಲಿಸಿರುವುದಿಲ್ಲ ಹಾಗಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 15(4) ಮತ್ತು 17(4) ರನ್ವಯ ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು, 1965ರ ನಿಯಮ 37(2) ರನ್ವಯ ಕೆಲಸವನ್ನು ತೆಗೆದುಹಾಕಲು ಅಥವಾ ಕೆಳಗೆ ಎಳೆಯಲು (to remove or pull down the work) ಅಥವಾ ಭೂಮಿಯನ್ನು ಅದರ ಮೂಲ ಸ್ಥಿತಿಗೆ (to restore the land to its original condition) ಮರುಸ್ಥಾಪಿಸುವಂತೆ ಏಕೆ ಸೂಚಿಸಬಾರದು ಎಂಬುದಾಗಿ ಜಮೀನಿನ ಮಾಲೀಕರುಗಳಿಗೆ ನೋಟೀಸು ನೀಡಬಹುದಾಗಿರುತ್ತದೆ ಹಾಗೂ ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು, 1965ರ ನಿಯಮ 37(2) ರನ್ವಯ ಪ್ರಕರಣದ ಬಗ್ಗೆ ವಿಚಾರಣೆಯನ್ನು ನಡೆಸಲು ದಿನಾಂಕವನ್ನು (ನೋಟೀಸು ಜಾರಿಯಾದ ದಿನಾಂಕದಿಂದ ಏಳು ದಿನಗಳಿಗೆ ಕಡಿಮೆ ಇಲ್ಲದಂತೆ) ನಿಗಧಿಪಡಿಸಬಹುದಾಗಿರುತ್ತದೆ ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು, 1965ರ ನಿಯಮ 37(3) ರನ್ವಯ ಪ್ರಾಧಿಕಾರವು ಪ್ರಕರಣದ ಬಗ್ಗೆ ವಿಚಾರಣೆ ನಡೆಸಲು ಪ್ರಾಧಿಕಾರದ ಮೂವರು ಸದಸ್ಯರಿಗೆ ಕಡಿಮೆ ಇಲ್ಲದಂತೆ ಸದಸ್ಯರ ಸಮಿತಿಯನ್ನು ನೇಮಿಸಬಹುದಾಗಿದೆ ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು, 1965ರ ನಿಯಮ 37(4) ರನ್ವಯ ಜಮೀನಿನ ಮಾಲೀಕರ ಹೇಳಿಕೆಯನ್ನು ಪರಿಶೀಲಿಸಿ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ ಮುಂದಿನ ಕ್ರಮದ ಬಗ್ಗೆ ತೀರ್ಮಾನಿಸಿ ನಿರ್ಣಯಿಸಬಹುದಾಗಿರುತ್ತದೆ. ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

<u>ನಿರ್ಣಯ:</u> ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಶ್ನಿತ ಜಮೀನು ಕೃಷಿಯೇತರ (ನರ್ಸಿಂಗ್ ಹೋಂ) ಉದ್ದೇಶಕ್ಕೆ ಭೂ–ಪರಿವರ್ತನೆಗೊಂಡಿರುವುದಾಗಿ ಸದಸ್ಯರು ಸಭೆಗೆ ತಿಳಿಸಿದರು. ಭೂ–ಪರಿವರ್ತಿತ ಜಮೀನಿಗೆ ನಿಯಮಾನುಸಾರ ವಿನ್ಯಾಸ ಅನುಮೋದನೆ ಪಡೆಯದೇ ಇದ್ದರೂ ಸಹ ಪಟ್ಟಣ ಪಂಚಾಯಿತಿಯಿಂದ ನಮೂನೆ–3 (ಖಾತೆ) ಹೇಗೆ ನೀಡಲಾಗಿದೆ ಎಂಬುದಾಗಿ ಸಭೆಯಲ್ಲಿ ಹಾಜರಿದ್ದ ಮುಖ್ಯಾಧಿಕಾರಿಯವರನ್ನು ಸಭೆಯು ಕೇಳಿತು. ಮುಖ್ಯಾಧಿಕಾರಿಯವರು ಮಾತನಾಡಿ ಹಿಂದಿನ ಮುಖ್ಯಾಧಿಕಾರಿಯವರು ನಮೂನೆ–3

(ಖಾತೆ) ವಿತರಿಸಿರುವುದಾಗಿ ಸಭೆಗೆ ಮಾಹಿತಿ ನೀಡಿದರು. ನಮೂನೆ–3 (ಖಾತೆ) ಗಳನ್ನು ಸಭೆಯಲ್ಲಿ ಪರಿಶೀಲಿಸಲಾಗಿ ಕೆಲವು ನಮೂನೆ–3 ರಲ್ಲಿ ಅನಧಿಕೃತ ಮತ್ತು ಇನ್ನು ಕೆಲವು ನಮೂನೆ–3 ರಲ್ಲಿ ಅಧಿಕೃತ ಎಂಬುದಾಗಿ ಖಾತೆಗಳಲ್ಲಿ ನಮೂದಿಸಿರುವುದನ್ನು ಸಭೆಯು ಗಮನಿಸಿತು. ಈ ಬಗ್ಗೆ ಪರಿಶೀಲಿಸಿದ ಮುಖ್ಯಾಧಿಕಾರಿಗಳು ಕಟ್ಟಡ ಇರುವ ಖಾತೆಗಳಲ್ಲಿ ಅಧಿಕೃತ ಹಾಗೂ ಖಾಲಿ ನಿವೇಶನಕ್ಕೆ ಅನಧಿಕೃತ ಎಂಬುದಾಗಿ ನಮೂದಿಸಿ ನಮೂನೆ–3 (ಖಾತೆ) ಹಿಂದಿನ ಮುಖ್ಯಾಧಿಕಾರಿಯವರು ನೀಡಿರುವುದಾಗಿ ತಿಳಿಸಿದರು. ಸದಸ್ಯ ಕಾರ್ಯದರ್ಶಿಯವರು ಮಾತನಾಡಿ ಭೂ–ಪರಿವರ್ತಿತ ಜಮೀನಿಗೆ ಸಕ್ಷಮ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆಯದೇ ಇರುವ ನಿವೇಶನಗಳಿಗೆ ಖಾತೆ ನೀಡಲು ಅವಕಾಶವಿರುವುದಿಲ್ಲ ಈ ಬಗ್ಗೆ ಸರ್ಕಾರದ ಸುತ್ತೋಲೆ ಇರುವ ಬಗ್ಗೆ ಸಭೆಗೆ ತಿಳಿಸಿದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರದಿಂದ ದಿನಾಂಕ: 12–05–2020 ರಂದು ಪತ್ರ ಬರೆದು ಯಾವುದೇ ಖಾತೆ ನೊಂದಾಯಿಸಬಾರದು ಎಂಬುದಾಗಿ ಪಟ್ಟಣ ಪಂಚಾಯಿತಿಗೆ ತಿಳಿಸಲಾಗಿದೆ ಹಾಗೂ ಉಪನೋಂದಣಾಧಿಕಾರಿಗಳಿಗೂ ಸಹ ಜಮೀನನ್ನು ನೋಂದಣಿ ಮಾಡದಂತೆ ದಿನಾಂಕ: 09–06–2020 ರಂದು ತಿಳಿಸಲಾಗಿದೆ ಹಾಗೂ ಅನಧಿಕೃತ ಬಡಾವಣೆ ಕಾಮಾಗಾರಿಯನ್ನು ಸ್ಥಗಿತಗೊಳಿಸಲು ಹಾಗೂ ಕರ್ನಾಟಕ ಪುರಸಭೆ ಕಾಯ್ದೆ 1964 ರನ್ವಯ ಕ್ರಮವಹಿಸಲು ಪಟ್ಟಣ ಪಂಚಾಯಿತಿಗೆ ಈ ಹಿಂದೆಯೇ ಸೂಚಿಸಲಾಗಿತ್ತು ಹಾಗೂ ಅಭಿವೃದ್ಧಿಗಳಿಗೆ ಅನುಮತಿ ಪಡೆದಿದ್ದಲ್ಲಿ ದಾಖಲೆ ಸಲ್ಲಿಸುವಂತೆ ಹಾಗೂ ಅಲ್ಲಿಯವರೆಗೆ ಕಾಮಾಗಾರಿ ತಕ್ಷಣ ಸ್ಥಗಿತಗೊಳಿಸುವಂತೆ ಜಮೀನಿನ ಮಾಲೀಕರಿಗೆ ದಿನಾಂಕ: 09–06–2020 ಹಾಗೂ 11–01–2022 ರಲ್ಲಿ ನೋಟೀಸು ನೀಡಲಾಗಿತ್ತು. ಆದರೆ ಇದುವರೆಗೆ ಕಛೇರಿಗೆ ಯಾವುದೇ ದಾಖಲೆಗಳನ್ನು ಜಮೀನಿನ ಮಾಲೀಕರು ಹಾಜರುಪಡಿಸಿರುವುದಿಲ್ಲ ಎಂಬುದಾಗಿ ಸದಸ್ಯ ಕಾರ್ಯದರ್ಶಿಯವರು ಸಭೆಗೆ ತಿಳಿಸಿದರು. ವಿಷಯದ ಬಗ್ಗೆ ಸುಧೀರ್ಘವಾದ ಚರ್ಚೆ ನಡೆದು ಮಾನ್ಯ ಉಚ್ಚನ್ಯಾಯಾಲಯದ ಆದೇಶದಂತೆ ಕಾನೂನಿನ ಪ್ರಕಾರ ಕ್ರಮತೆಗೆದುಕೊಳ್ಳಲು, ಈ ಹಿಂದೆ ಪ್ರಾಧಿಕಾರದಿಂದ ನೀಡಿರುವ ನೋಟಿಸಿಗೆ ಸಂಬಂಧಿಸಿದಂತೆ ಜಮೀನಿನ ಮಾಲೀಕರುಗಳು ಅನುಮೋದನೆ ಪಡೆದಿರುವ ಬಗ್ಗೆ ಯಾವುದೇ ದಾಖಲೆಗಳು ಸಲ್ಲಿಸಿರುವುದಿಲ್ಲವಾದ್ದರಿಂದ ಮತ್ತು ಜಮೀನಿನ ಮಾಲೀಕರು ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆಯದೇ ಲೇಔಟ್ ನಿರ್ಮಿಸಿ ಜಮೀನಿನಲ್ಲಿ ಅಭಿವೃದ್ಧಿ ಕಾಮಗಾರಿ ನಡೆಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 15(1) ಮತ್ತು 17(1) ಅನ್ನು ಉಲ್ಲಂಘಿಸಿರುವುದರಿಂದ ಸ.ನಂ. 115/1 ರಲ್ಲಿ ಅನಧಿಕೃತವಾಗಿ ಬಡಾವಣೆ ನಿರ್ಮಿಸಿರುವ ಬಡಾವಣೆ ಮಾಲೀಕರಾದ ಶ್ರೀ ಕೆ.ಎಂ. ಜಗದೀಶ್ ಬಿನ್ ದಿ॥ ಮಲ್ಲೇಗೌಡ, ಶ್ರೀ ಎ.ಎಂ. ವಿಶ್ವನಾಥ್ ಬಿನ್ ಆರ್. ಮುತ್ತಣ್ಣ ಹಾಗೂ ಶ್ರೀ ಬಿ.ಜೆ. ಶಮಂತ್ ಬಿನ್ ಬಿ.ಎ. ಜೀವಿಜಯ ಇವರಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961, ಕಲಂ 15(4), 17(4) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು, 1965 ರ ನಿಯಮ 37(2) ರನ್ವಯ ಕೆಲಸವನ್ನು ತೆರವುಗೊಳಿಸಲು ಅಥವಾ ಒಡೆದುಹಾಕಲು (to remove or pull down the work) ಅಥವಾ ಭೂಮಿಯನ್ನು ಅದರ ಮೂಲ ಸ್ಥಿತಿಗೆ (to restore the land to its original condition) ಮರುಸ್ಥಾಪಿಸುವಂತೆ ಏಕೆ ನಿರ್ದೇಶಿಸಬಾರದು ಎಂಬುದಾಗಿ ನೋಟೀಸು ನೀಡುವಂತೆ ಸರ್ವಾನುಮತದಿಂದ ಸಭೆಯು ತೀರ್ಮಾನಿಸಿ ನಿರ್ಣಯಿಸಿತು ಹಾಗೂ ನೋಟೀಸು ತಲುಪಿದ ಏಳು ದಿನಗಳ ಒಳಗೆ ಬಡಾವಣೆ ಮಾಲೀಕರು ಹೇಳಿಕೆಯನ್ನು ಪ್ರಾಧಿಕಾರದ ಕಛೇರಿಗೆ ಸಲ್ಲಿಸುವಂತೆ ಸೂಚಿಸಲು ಸಭೆಯು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿತು. ಬಡಾವಣೆ ಮಾಲೀಕರ ಹೇಳಿಕೆಯನ್ನು ಪರಿಶೀಲಿಸಲು ಹಾಗೂ ಪ್ರಕರಣದ ವಿಚಾರಣೆ ನಡೆಸಲು ಪ್ರಾಧಿಕಾರದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರನ್ನು ಒಳಗೊಂಡಂತೆ ಸಮಿತಿಯನ್ನು ಕರ್ನಾಟಕ ಯೋಜನಾ ಪ್ರಾಧಿಕಾರದ ನಿಯಮಗಳು, 1965 ರ ನಿಯಮ 37(3) ರಂತೆ ನೇಮಿಸಲು ಹಾಗೂ ನಿಯಮ 37(4) ರನ್ವಯ ಜಮೀನಿನ ಮಾಲೀಕರ ಹೇಳಿಕೆಯನ್ನು ಸಮಿತಿಯು ಪರಿಶೀಲಿಸಿ ಮುಂದಿನ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಿ ನಿರ್ಣಯಿಸಲಾಯಿತು ಹಾಗೂ ಪಟ್ಟಣ ಪಂಚಾಯಿತಿಗೆ ದಿನಾಂಕ: 12–05–2020 ರಲ್ಲಿ ಪ್ರಶ್ನಿತ ಭೂ–ಪರಿವರ್ತಿತ ಜಮೀನನ್ನು

ವಿಭಜಿಸಲು ಪ್ರಾಧಿಕಾರದಿಂದ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆಯದಿರುವ ಕಾರಣ, ಮೇಲ್ಕಾಣಿಸಿದ ಸರ್ವೆ ನಂಬರ್‌ನಲ್ಲಿರುವ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಖಾತೆಯನ್ನು ತಮ್ಮ ಕಛೇರಿಯಲ್ಲಿ ನೊಂದಾಯಿಸಬಾರದೆಂದು ತಿಳಿಸುತ್ತಾ, ಈ ಬಗ್ಗೆ ಸಂಬಂಧಪಟ್ಟ ಜಮೀನಿನ ಮಾಲೀಕರಿಗೆ ಸೂಚನೆಯನ್ನು ನೀಡಿ ಅನಧಿಕೃತ ಬಡಾವಣೆಯನ್ನು ನಿರ್ಮಿಸಲು ಅವಕಾಶ ನೀಡಬಾರದೆಂದು ತಿಳಿಸಿದ್ದರೂ ಸಹ ಜಮೀನನ್ನು ಅಭಿವೃದ್ಧಿಪಡಿಸುತ್ತಿರುವ ಬಗ್ಗೆ ಯಾವುದೇ ಕ್ರಮವಹಿಸದೇ ಪಟ್ಟಣ ಪಂಚಾಯಿತಿ ನಮೂನೆ–3 (ಖಾತೆ) ನೀಡಿರುವ ಬಗ್ಗೆ ಹಾಗೂ ದಿನಾಂಕ: 09–06–2020 ಮತ್ತು ದಿನಾಂಕ: 11–01–2022 ರ ನೋಟೀಸುಗಳಲ್ಲಿ ಅನಧಿಕೃತ ಬಡಾವಣೆ, ಕಾಮಾಗಾರಿ ಸ್ಥಗಿತಗೊಳಿಸಲು ಹಾಗೂ ಕರ್ನಾಟಕ ಪುರಸಭೆ ಕಾಯ್ದೆ 1964 ರನ್ವಯ ಮುಂದಿನ ಕ್ರಮ ಕೈಗೊಳ್ಳಲು ಸೂಚಿಸಿದ್ದರೂ ಸಹ ಕ್ರಮವಹಿಸದಿರುವ ಬಗ್ಗೆ ಈ ಕಛೇರಿಗೆ ವಿವರಣೆ ನೀಡುವಂತೆ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳಿಗೆ ಮತ್ತು ದಿನಾಂಕ: 09–06–2020 ರ ಈ ಕಛೇರಿ ಪತ್ರದಲ್ಲಿ ನಿವೇಶನ ನೊಂದಾವಣೆ ಮಾಡದಂತೆ ಸೂಚಿಸಿದ್ದರೂ ಸಹ ನಿವೇಶನಗಳನ್ನು ನೊಂದಾವಣೆ ಮಾಡಿರುವುದಕ್ಕೆ ವಿವರಣೆ ನೀಡುವಂತೆ ಸೂಚಿಸಿ ಉಪನೊಂದಾಣಾಧಿಕಾರಿಗಳಿಗೆ ಪತ್ರ ಬರೆಯಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

<u>ವಿಷಯ ಸಂಖ್ಯೆ: 05–</u> ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು:–

–ಯಾವುದೂ ಇರುವುದಿಲ್ಲ–

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಸಹಿ/–	ಸಹಿ/–
ಸದಸ್ಯ ಕಾರ್ಯದರ್ಶಿ	ಅಧ್ಯಕ್ಷರು
ಕುಶಾಲನಗರ ಯೋಜನಾ ಪ್ರಾಧಿಕಾರ	ಕುಶಾಲನಗರ ಯೋಜನಾ ಪ್ರಾಧಿಕಾರ
ಕುಶಾಲನಗರ	ಕುಶಾಲನಗರ